ಶ್ರೀ ಹೆಚ್.ಡಿ. ದೇವೇಗೌಡ.—ಅಧ್ಯಕ್ಷರೇ, ಈ ವಿಷಯ ಉದ್ಭವವಾಗಿರುವುದರ ಹಿನ್ನೆಲೆಯೆಂದರೆ ಇದರ ಬಗ್ಗೆ ದಿನಾಂಕ ೨೯-೭-೧೯೮೪ರ ಪ್ರಜಾವಾಣಿಯಲ್ಲಿ ಶ್ರೀ ಬಿ.ವಿ. ಲಕ್ಷ್ಮಣಗೌಡ ಎಂಬುವರು ವಾಚಕರ ವಾಣಿ ವಿಭಾಗದಲ್ಲಿ ಪತ್ರ ಬರೆದಿದ್ದರು. ಅವರ ಆಧಾರದ ಮೇಲೆ ಈ ಸಮಸ್ಯೆ ಬಂದಿದೆ. ಇದರ ಬಗ್ಗೆ ಸರ್ಕಾರ ಅಂತಿಮವಾಗಿ ಏನೂ ಹೇಳಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ತಿರಸ್ಕಾರ ಅಥವಾ ಉಪೇಕ್ಷೆ ಮಾಡುವ ಪ್ರಶ್ನೆಯೇ ಇಲ್ಲ. ಸಕಾಲದಲ್ಲಿ ಇದನ್ನು ಪರಿಶೀಲನೆ ಮಾಡಲಾಗುವುದು.

ಉತ್ತರ ಕರ್ನಾಟಕದ ನೀರಾವರಿ ಯೋಜನೆಗೆ ಹೆಚ್ಚಿನ ಹಣ ಒದಗಿಸುವುದು

೭೩೫. ಶ್ರೀ ಮಂಟೂರ ಜಿ.ವಿ.(ಬಾಗಲಕೋಟೆ).—ಮಾನ್ಯ ಲೋಕೋಪಯೋಗಿ ಜಲಾನಸಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.

(ಅ) ಘಟಪ್ರಭಾ ಬಲ ಹಾಗೂ ಎಡದಂಡೆ ನಾಲೆ ಹಾಗೂ ಸದರಿ ಪ್ರದೇಶದ ಇನ್ನಿತರ ಯೋಜನೆಗಳಿಗೆ ಸಾಕಷ್ಟು ಹಣವನ್ನು ಮಂಜೂರ್ಮಾಡದಿರುವುದಕ್ಕೆ ಕಾರಣಗಳೇನು.

(ಆ) ಸದರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಲಾಗುವುದೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

(ಅ) ಘಟಪ್ರಭಾ ಬಲ ಹಾಗೂ ಎಡದಂಡೆ ನಾಲೆ ಹಾಗೂ ಸದರಿ ಪ್ರದೇಶದ ಇನ್ನಿತರ ಯೋಜನೆಗಳಿಗೆ ೧೯೮೫ ಆಯವ್ಯಯ ಪಟ್ಟಿಯಲ್ಲಿ ೯.೫೦ ಕೋಟಿ ರೂ.ಗಳನ್ನು ಕಾದಿರಿಸಲಾಗಿದೆ.

(ಆ) ರಾಜ್ಯದ ಆರ್ಥಿಕ ಸಂಪನ್ಮೂಲಗಳ ಲಭ್ಯತೆಯನ್ನು ಅನುಸರಿಸಿ ಹಣವನ್ನು ಒದಗಿಸಲಾಗುವುದು.

ಶ್ರೀ ಮಂಟೂರ ಜಿ.ವಿ..—ಮಾನ್ಯ ಅಧ್ಯಕ್ಷರೇ, ಸಚಿವರು ಘಟಪ್ರಭಾ ಬಲ ಹಾಗೂ ಎಡದಂಡೆ ನಾಲೆ ಹಾಗೂ ಸದರಿ ಪ್ರದೇಶದ ಇನ್ನಿತರ ಯೋಜನೆಗಳಿಗಾಗಿ ೯.೫೦ ಕೋಟಿ ರೂಪಾಯಿಗಳನ್ನು ಕಾದಿರಿಸಿರುವುದಾಗಿ ತಿಳಿಸಿದ್ದಾರೆ ನನ್ನ ಕಳಕಳಿ ಏನೆಂದರೆ ಹಣ ಇದ್ದವಿದ್ದರೂ ಕೆಲಸ ಇನ್ನೂ ಪ್ರಾರಂಭಿಸದಿರುವುದು. ಆದ್ದರಿಂದ ಕೂಡಲೇ ಈ ಕೆಲಸವನ್ನು ಪ್ರಾರಂಭಿಸಲು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಈ ಪ್ರೊಜೆಕ್ಟನ್ನು ಮುಗಿಸಬೇಕೆಂಬ ತೀವ್ರತೆ ನನಗೂ ಇದೆ. ಆಲ್ಲದೆ ಕೊರತೆ ಬೀಳುವ ಮೊಬಲಗಿಗಾಗಿ ಈಗಾಗಲೇ ವಿಶ್ವಬ್ಯಾಂಕಿನ ನೆರವಿಗಾಗಿ ಪ್ರಯತ್ನ ನಡೆದಿದೆ. ಈಗಿಟ್ಟಿರುವ ಹಣ ಸಮಾಧಾನಕರವಾದ ಪ್ರಮಾಣದಲ್ಲಿಲ್ಲವೆಂದು ತಿಳಿಸಬೇಕಾಗಿದೆ.

ಮಹಿಳಾ ಶ್ರೇಯೋಭಿವೃದ್ಧಿ ಕೇಂದ್ರಗಳ ಆಸ್ಥಿತ್ವದ ಬಗ್ಗೆ

೭೯೧. ಶ್ರೀ ಜಿ. ರಾಜುಗೌಡ (ಹನೂರು) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ಶ್ರೇಯೋಭಿವೃದ್ಧಿ ಕೇಂದ್ರಗಳು ಯಾವಾಗ ಅಸ್ಥಿತ್ವಕ್ಕೆ ಬಂದವು?

ಆ) ಅಲ್ಲಿರುವ ನೌಕರವರ್ಗದವರು ಅಂದಿನಿಂದ ಇಲ್ಲಿಯವರೆಗೂ ದಿನಗೂಲಿ ಕೆಲಸದ ಮೇಲೆ ಕಾರ್ಯ ನಿರ್ವಹಿಸುತ್ತಿರುವುದು ನಿಜವೇ?

ಇ) ಆಶ್ರಮ ಪಾಠಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹ ಉಪಾಧ್ಯಾರಿಗೂ ಮಹಿಳಾ ಶ್ರೇಯೋಭಿವೃದ್ಧಿ ಕೇಂದ್ರದೊಳಗಿರುವ ಉಪಾಧ್ಯಾಯರಿಗೂ ಕೊಡುತ್ತಿರುವ ವೇತನದಲ್ಲಿ ವ್ಯತ್ಯಾಸ ವಿದೆಯೇ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?